C.R.P.67

Form No.4 (Civil)
Deposition Sheets
(R.P.No.57)

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ ಮಂಡ್ಯ

S.C. No. 121/2021 ಸಿ. ಡಬ್ಲ್ಯೂ - 10 ಪಿ. ಡಬ್ಲ್ಯೂ -9

ದಿನಾಂಕ : 22.01.2024 ರಂದು ಪ್ರಮಾಣ ವಚನ ಬೋದಿಸಲಾಗಿದೆ

| | |
|---|---|
| ಸಾಕ್ಷಿದಾರರ ಹೆಸರು | ಚಿದಾನಂದ |
| ತಂದೆಯ ಹೆಸರು | ಮರಿಯಪ್ಪ |
| ವಯಸ್ಸು | 32 ವರ್ಷ |
| ಉದ್ಯೋಗ | ವ್ಯವಸಾಯ |
| ವಾಸ | ಗೆಜ್ಜಲಗರೆ ಗ್ರಾಮ |

ಮುಖ್ಯ ವಿಚಾರಣೆ : ಮಾನ್ಯ ಸರ್ಕಾರಿ ಅಭಿಯೋಜಕರಿಂದ :

1. ಈಗ ನಾನು ನೋಡುತ್ತಿರುವ ಸಹಿ ನನ್ನದು. ನೋಟೀಸಿನಲ್ಲಿರುವ ತಮ್ಮ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಸದರಿ ನೊಟೀಸನ್ನು ನಿಪಿ.41 ಎಂದೂ ಸಾ.ಸಹಿಯನ್ನು ನಿಪಿ.41(ಎ) ಎಂದು ಗುರುತಿಸಲಾಯಿತು. ಅಮಾನತು ಪಂಚನಾಮೆಯಲ್ಲಿರುವ ತಮ್ಮ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಸದರಿ ಅಮಾನತು ಪಂಚನಾಮೆಯ ನಿಪಿ.42 ಎಂದೂ ಸಾ.ಸಹಿಯನ್ನು ನಿಪಿ.42(ಎ) ಎಂದು ಗುರುತಿಸಲಾಯಿತು. 2 ವರುಷಗಳ ಹಿಂದೆ ನಾನು ಗದ್ದೆಯಿಂದ ನೀರು ಬಿಟ್ಟು ವಾಪಸ್ಸು ಮನೆಗೆ ಕುದುರೆಗುಂಡಿ ರಸ್ತೆಯಲ್ಲಿ ಬರುತ್ತಿದ್ದಾಗ ಅಲ್ಲಿ ಪೋಲಿಸರು ಇದ್ದು ನನ್ನನ್ನು ಮಹಜರಿಗಾಗಿ ನಿಲ್ಲಿಸಿದರು. ಸದರಿ ಸ್ಥಳದಲ್ಲಿ ಪೊಲೀಸರು ಅಲ್ಲದೇ ಇನ್ನು ಒಬ್ಬ ವ್ಯಕ್ತಿ ಹಾಜರಿದ್ದರು. ಸ್ಥಳದಲ್ಲಿ ಕಪ್ಪು ಕಾರೊಂದು ನಿಂತಿತ್ತು. ಕಾರಿನ ಟೈರಿನ ಡಿಸ್ಕು ಮಾತ್ರ ಇದ್ದು ಟೈರು ಬ್ರಸ್ಟ್ ಆಗಿ ಕಳಚಿತ್ತು. ಪೊಲೀಸರು ಮಹಜರ್ ಮಾಡಿ ಫೋಟೋ ತೆಗೆದರು. ಪೊಲೀಸರು ಗೆಜ್ಜಲಗರೆಯಿಂದ ಅಪಘಾತ ಮಾಡಿಕೊಂಡು ಸದರಿ ಕಪ್ಪು ಕಾರು ಬಂದಿದೆ, ಅದನ್ನು ನಾವು ತೆಗೆದುಕೊಂಡು ಹೋಗುತ್ತಿದ್ದೇವೆ ಎಂದು ಪೊಲೀಸರು ನನಗೆ ಹೇಳಿದರು. ಸ್ಥಳಕ್ಕೆ ಕಾರನ್ನು ಎಳೆದುಕೊಂಡು ಹೋಗಲು ಕ್ರೇನ್ ಬಂದಿತ್ತು. ಕಪ್ಪು ಕಾರಿನ ನೊಂದಾವಣಿ ಸಂಖ್ಯೆಯನ್ನು ನಾನು ಹೇಳಲಾರೆ. ನನಗೆ ಓದಲು ಬರುವುದಿಲ್ಲ. ಮಹಜರ್ ಬರೆದ ನಂತರ ಪೊಲೀಸರು ಫೋಟೋ ತೆಗೆದರು. ಬೀದಿ ದೀಪದ ಬೆಳಕಿನ ಸಹಾಯದಿಂದ ಪೊಲೀಸರು ಮಹಜರು ಬರೆದರು. ಸಾಕ್ಷಿಯು 2 ಫೋಟೋಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ಕ್ರಮವಾಗಿ ನಿಪಿ. 43 ಮತ್ತು 44 ಎಂದು ಗುರುತಿಸಲಾಯಿತು. ಸದರಿ ಫೋಟೋ ಗಳಲ್ಲಿ ಬಿಳಿ ಶರಟು ಧರಿಸಿದವನು ನಾನು ಆಗಿದ್ದು, ಅಲ್ಲಿ ನನ್ನ ಪಕ್ಕದಲ್ಲಿರುವವರು ಸ್ಥಳದಲ್ಲಿದ್ದ ಮತ್ತೊಬ್ಬ ವ್ಯಕ್ತಿ ಎಂದು ಸಾಕ್ಷಿ ಗುರುತಿಸಿರುತ್ತಾರೆ.

<u>ಪಾಟೀ ಸವಾಲು : ಆರೋಪಿ ಪರವಾಗಿ ಶ್ರೀ. ಸಿ. ಪಿ. ವಕೀಲರಿಂದ :</u>

2. ಸಾಕ್ಷಿ ಆನಂದ ನನ್ನ ಸಹೋದರನಲ್ಲ. ಮಹಜರ್ ಮಾಡಿದ ಸ್ಥಳ ಗೆಜ್ಜಲಗರೆ ಗ್ರಾಮದಿಂದ 2 ಕಿಮಿ ದೂರದಲ್ಲಿದೆ. ನಮ್ಮ ಊರಿನ ಮಧ್ಯಭಾಗದಿಂದ ಕುದುರಗುಂಡಿ ರಸ್ತೆಯಲ್ಲಿ ಒಂದು ಕಿಮಿ ವರೆಗೂ ಮನೆಗಳು ಇವೆ. ಪೊಲೀಸರು ಸ್ಥಳದಲ್ಲಿ ಬರೆದ ಮಹಜರನ್ನು ನನಗೆ ಓದಿ ಹೇಳಿರುವುದಿಲ್ಲ. ಮಹಜರು ಕಾಲದಲ್ಲಿ ಪೊಲೀಸರು ಕಾರಿನ ಬಾಗಿಲನ್ನು ತೆಗೆದು ಒಳಗೆ ನೋಡಿದರೋ ಇಲ್ಲವೋ ನನಗೆ ಗೊತ್ತಿಲ್ಲ. ನಾನು ಸ್ಥಳಕ್ಕೆ ಹೋಗುವಷ್ಟರಲ್ಲಿ ಕ್ರೇನ್ ಸ್ಥಳಕ್ಕೆ ಬಂದು ನಿಂತಿತ್ತು.

3. ಪೊಲೀಸರು ಕುದುರೆಗುಂಡಿ ರಸ್ತೆಯಲ್ಲಿ ನನ್ನ ಸಮಕ್ಷಮ ಮಹಜರ್ ಮಾಡಿ ಕಾರನ್ನು ವಶಪಡಿಸಿಕೊಂಡಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಪೊಲೀಸ್ ಠಾಣೆಯಲ್ಲಿ ಮಹಜರಿಗೆ ಸಹಿ ಮಾಡಿರುತ್ತೇನೆ ಎಂದರೆ ಸರಿಯಲ್ಲ.

<u>ಮರು ವಿಚಾರಣೆ : ಮಾನ್ಯ ಸರ್ಕಾರಿ ಅಭಿಯೋಜಕರಿಂದ :</u>

ಏನೂ ಇಲ್ಲ

(ನನ್ನ ಉಕ್ತಲೇಖನ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸ. ಒ

(ಬಿ.ಜಿ.ರಮಾ)
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಮಂಡ್ಯ.